ಮಂಗಳೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಕಂಪನಿಗೆ ಸಹಕಾರಿ ಸಂಘಗಳ ಷೇರು ಹಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 365(534)

ಸದಸ್ಯರ ಹೆಸರು : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ(ಧಾರವಾಡ)

ಉತ್ತರಿಸುವ ಸಚಿವರು : ಶ್ರೀ ಆರ್.ದೇಶಪಾಂಡೆ(ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಪ್ರಶ್ನೆ

ಅ) ಮಂಗಳೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಕಂಪನಿಯಲ್ಲಿ ರಾಜ್ಯದ ಎಷ್ಟು ಸಹಕಾರಿ ಸಂಘಗಳು ಎಷ್ಟೆಷ್ಟು ಹಣವನ್ನು ಷೇರು ಹಣವನ್ನಾಗಿ ತೊಡಗಿಸಿವೆ?

ಆ) ಈ ಕಂಪನಿ 1999-2000, 2000-2001ನಲ್ಲಿ ಮಾರಾಟ ಮಾಡಿದ ವಿವಿಧ ಗೊಬ್ಬರಗಳ ಮೊತ್ತವೆಷ್ಟು?

ಇ) ಈ ಕಾರ್ಖಾನೆ ದಿ:31-3-2001ಕ್ಕೆ ಗಳಿಸಿದ ಒಟ್ಟು ಹಾನಿಯ ಮೊತ್ತ ಹಾಗೂ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ನೀಡಿರುವ ವಿವಿಧ ಹಣಕಾಸು ನೆರವು ಮತ್ತು ಸಾಲದ ಮೊತ್ತವೆಷ್ಟು?

ಈ) ಈ ಕಂಪನಿಯ ಅಧಿಕಾರಿ 1999-2000 ಹಾಗೂ 2000-2001ರಲ್ಲಿ ಪಡೆದ ಒಟ್ಟಾರೆ ಸಂಭಾವನೆ ಎಷ್ಟು?

ಉತ್ತರ

ಅ) ಮಂಗಳೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಕಂಪನಿಯಲ್ಲಿ ರಾಜ್ಯದ ಒಟ್ಟು 225 ಸಹಕಾರಿ ಸಂಘಗಳು ರೂ.24,76,850-00ಗಳನ್ನು ಈಕ್ವಿಟಿ ಷೇರುಗಳನ್ನಾಗಿ ಹೂಡಿರುತ್ತವೆ.

ಆ) 1999-2000, 2000-01ರಲ್ಲಿ ಸದರಿ ಕಂಪನಿಯು ಮಾರಾಟ ಮಾಡಿರುವ ವಿವರಗಳು ಕೆಳಕಂಡಂತಿದೆ:

ವಿವರಗಳು	2000-2001		1999-2000	
	ಪ್ರಮಾಣ (ಎಂಟಿಎಸ್)	ಬೆಲೆ (ರೂ.ಲಕ್ಷ ಗಳಲ್ಲಿ)	ಪ್ರಮಾಣ (ಎಂಟಿಎಸ್)	ಬೆಲೆ (ರೂ.ಲಕ್ಷ ಗಳಲ್ಲಿ)
ಯೂರಿಯಾ	3,48,713	43302.34	3,33,289	33,859.19
ಡೈಅಮೋನಿಯಂ ಫಾಸ್ಪೇಟ್	1,67,000	20591.91	2,08,769	25391.60
ಇತರೆ	57,526	3607.54	35,806	2064.44
ಒಟ್ಟು	5,73,239	67501.79	5,77,864	61315.23

ಇ) ಸದರಿ ಕಂಪನಿಯು 1996-97ರ ನಂತರ ಲಾಭದಲ್ಲಿ ನಡೆಯುತ್ತಿದೆ. ದಿ:31-3-2001ರವರೆಗೆ ಕಂಪನಿಯ ಸಂಚಿತ ನಿವ್ವಳ ಲಾಭ ರೂ.41.53 ಕೋಟಿಗಳು. ರಾಜ್ಯ ಸರ್ಕಾರದ ಸಾಲ ರೂ.28.32 ಕೋಟಿಗಳಾಗಿದ್ದು ಅದನ್ನು 5 ಸಮ ವಾರ್ಷಿಕ ಕಂತುಗಳಲ್ಲಿ ಮರುಪಾವತಿಸಬೇಕಾಗಿದ್ದು ಮೊದಲನೆ ಕಂತು 2005-06ರಿಂದ ಪ್ರಾರಂಭವಾಗುತ್ತಿದೆ. ಕೇಂದ್ರ ಸರ್ಕಾರದಿಂದ ಸದರಿ ಕಂಪನಿಗೆ ಯಾವುದೇ ಧನಸಹಾಯವಿಲ್ಲ.

ಈ) ಈ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಿಗೆ 1996-97ರಿಂದ ಮಾಸಿಕ ರೂ.1-00ನ್ನು ಸಂಭಾವನೆಯಾಗಿ ಕಂಪನಿಯು ಪಾವತಿಸುತ್ತಿದೆ.

ಪಶುಪಾಲನಾ ಅಭಿವೃದ್ಧಿಗಾಗಿ ಹಾಲಿನ ಹಸು ಅಭಿವೃದ್ಧಿ ತಳಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 366(536)

ಸದಸ್ಯರ ಹೆಸರು : ಶ್ರೀ ಬೆಲ್ಲದ ಚಂದ್ರಕಾಂತ ಗುರಪ್ಪ(ಧಾರವಾಡ)

ಉತ್ತರಿಸುವ ಸಚಿವರು : ಶ್ರೀ ಎ.ಕೃಷ್ಣಪ್ಪ(ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)